ಪ್ರಬಂಧ

# ಹುಯ್ಯೋ ಹುಯ್ಯೋ ಮಳೆರಾಯ



**ಅರುಣಾ ಕೆ.ಆರ್.**

ಕಲೆ: ಬಿ.ಜಿ. ಗುಜ್ಜಾರಪ್ಪ



ಮಲೆನಾಡಿನಿಂದ ಹಿಡಿದು ಬಯಲುಸೀಮೆಯ ಕವಿಗಳೆಲ್ಲಾ ಮಳೆ, ಹೊಳೆ, ಜಲಪಾತ ಹೀಗೆ ಜೀವಜಲದ ಬಗ್ಗೆ ಕವನಗಳನ್ನು ರಚಿಸಿದ್ದಾರೆ. ಮಳೆ ಅಂದರೆ ಅದು ಒಂಥರಾ ಲಹರಿ. ಅದರಲ್ಲೂ ಮಲೆನಾಡಿನಲ್ಲೇ ಹುಟ್ಟಿ ಬೆಳೆದ ನಮಗೆ ಮಳೆಯ ಅನುಭವಗಳ ನೆನಪುಗಳೇ ಸುಂದರ. ಮಲೆನಾಡಿಗೆ(ಮಲೆ=ಬೆಟ್ಟ) ಪರ್ಯಾಯಪದ ಮಳೆನಾಡು ಅನ್ನುವಷ್ಟರ ಮಟ್ಟಿಗೆ ಅಲ್ಲಿ ಮೇ ಕೊನೆಯ ಹೊತ್ತಿಗೆ ಪ್ರಾರಂಭವಾಗುವ ಮಳೆ ಜೂನ್ ಹೊತ್ತಿಗೆ ಹೆಚ್ಚಾಗುತ್ತಾ ಜುಲೈ–ಆಗಸ್ಟ್ ಹೊತ್ತಿಗೆ ಜಡಿಮಳೆ ಹಿಡಿದುಬಿಡುತ್ತದೆ. ನವೆಂಬರ್–ಡಿಸೆಂಬರ್ ಹೊತ್ತಿಗೆ ಕಡಿಮೆಯಾಗುತ್ತದೆ.

ನಗರದಲ್ಲಿ ಸ್ವಲ್ಪ ಜೋರಾಗಿ ಮಳೆ ಬಂದರೆ ಸಾಕು, ಅದು ಸೃಷ್ಟಿಸುವ ಅವಾಂತರಕ್ಕೆ ಜನರೆಲ್ಲ ಹೆದರಿ ಹೋಗ್ತಾರೆ. ಇದು ಪ್ರಕೃತಿಯ ತಪ್ಪಲ್ಲ. ಮಳೆಯ ರಭಸಕ್ಕೆ ಬಿದ್ದುಹೋಗುವ ಮರಗಳನ್ನು ಮೊದಲೇ ಮರಗಸಿ ಮಾಡದಿರುವುದು, ಮಳೆನೀರು ಹರಿದುಹೋಗಲು ತಡೆಯಾಗುವ ರಸ್ತೆಗಳ ಅವೈಜ್ಞಾನಿಕ ನಿರ್ಮಾಣ, ಕೆರೆ ಪ್ರದೇಶಗಳಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣ ಇತ್ಯಾದಿ ಇತ್ಯಾದಿ ಕಾರಣಗಳು. ಆದರೆ, ಮಲೆನಾಡಿನಲ್ಲಿ ಇದರ ದುಪ್ಪಟ್ಟಾಗಿ ಬೀಳುವ ಮಳೆಯನ್ನು ಕಂಡಿರುವ ನಮಗೆ ನಗರದ ಮಳೆ 'ಟುಸ್' ಎಂದೇ ಅನಿಸುತ್ತದೆ. ಅಭಿವೃದ್ಧಿಯ ಹೆಸರಲ್ಲಿ ಜನರ ದುರಾಸೆಗೆ ಬಲಿಯಾಗುತ್ತಿರುವ ಪರಿಸರ, ಅರಣ್ಯನಾಶ ಇವುಗಳಿಂದಾಗಿ ಈಗ ಮಲೆನಾಡಿನಲ್ಲಿಯೂ ಮಳೆ ಸ್ವಲ್ಪ ಕಡಿಮೆಯಾಗುತ್ತಾ ಬಂದಿದೆ. ವರ್ಷದಲ್ಲಿ ಸುಮಾರು ಆರು ತಿಂಗಳು ಮಳೆಗಾಲವಿರುತ್ತಿದ್ದ ಮಲೆನಾಡಿನಲ್ಲಿ ಈಗೀಗ ಮಳೆಯ ಸಮಯಸೂಚಿಯಲ್ಲಿಯೂ ವ್ಯತ್ಯಾಸ ಕಾಣಿಸುತ್ತಿದೆ.

ಬೇಸಿಗೆಯಲ್ಲಿ ಜನಜೀವನ ಸ್ವಲ್ಪ ಆರಾಮದಾಯಕವಾಗಿರುವ ಮಲೆನಾಡಿನಲ್ಲಿ ಮಳೆಗಾಲ ಆರಂಭಗೊಳ್ಳುವ ಮೊದಲೇ ಕೃಷಿ ಮತ್ತಿತರ ಚಟುವಟಿಕೆಗಳ ತಯಾರಿ ನಡೆಯುತ್ತದೆ. ಆಗಿನ ದಿನಗಳಲ್ಲಿ ಹಳ್ಳಿ ರಸ್ತೆಗಳು ಅಷ್ಟೇನೂ ಚೆನ್ನಾಗಿರುತ್ತಿರಲಿಲ್ಲ. ಮಳೆಗಾಲದಲ್ಲಿ ಕೆಸರಿನಿಂದಾಗಿ ಜಾರುವ ರಸ್ತೆಗಳು. ಹಾಗಾಗಿ, ಮಳೆಗಾಲ ಪ್ರಾರಂಭವಾಗುವ ಮೊದಲೇ ಸಾಕಷ್ಟು